# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ನಸೀರ್ ಅಹ್ಮದ್**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 254**
**ಉತ್ತರಿಸಬೇಕಾದ ದಿನಾಂಕ : 14.12.2021**
**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿರುವ ಪ್ರಾಥಮಿಕ ಸಹಕಾರ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿಯವರು ಈ ಸಂಘದ ವ್ಯಾಪ್ತಿಗೆ ಬರುವ ಅನೇಕ ಅಮಾಯಕ ರೈತರ ಗಮನಕ್ಕೆ ಬಾರದೇ ರೈತರ ದಾಖಲೆಗಳನ್ನು ಪಡೆದು ಅದರಿಂದ ಸಾಲಗಳನ್ನು ಪಡೆದು ತನ್ನ ಸ್ವಂತಕ್ಕಾಗಿ ಬಳಸಿಕೊಂಡಿರುವುದಲ್ಲದೇ ಸಾಲ ಮನ್ನಾವನ್ನು ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ಅಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಆ) | ಕರಜಗಿ ಪ್ರಾಥಮಿಕ ಪತ್ತಿನ ಸಹಕಾರ ಸಂಘದಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಯಾವ ದೂರುಗಳು ಈ ಸಂಘದ ಮೇಲೆ ಬಂದಿವೆ; | |
| ಇ) | ಸಾಲ ಮನ್ನಾ ಆದಾಗ ಎಷ್ಟು ರೈತರು ಫಲಾನುಭವಿಗಳಾಗಿದ್ದಾರೆ; ಈ ಸಾಲ ಮನ್ನಾದ ಫಲಾನುಭವಿಗಳ ಸಂಪೂರ್ಣ ಪಟ್ಟಿಯೊಂದಿಗೆ ಹಾಗೂ ಸಾಲಮನ್ನಾ ಆದ ಮೊತ್ತದ ಸಮೇತ ಪೂರ್ಣ ಮಾಹಿತಿಯನ್ನು ನೀಡುವುದು; | 2018-19 ನೇ ಸಾಲಿನ ರೂ 1.00 ಲಕ್ಷದವರೆಗಿನ ಸಾಲ ಮನ್ನಾದ ಫಲಾನುಭವಿಗಳ ಸಂಖ್ಯೆ 106 ಮತ್ತು ಸಾಲ ಮನ್ನಾದ ಮೊತ್ತ ರೂ.10.92 ಲಕ್ಷಗಳಾಗಿರುತ್ತದೆ. ಫಲಾನುಭವಿ ಸದಸ್ಯರ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಈ) | ಕರಜಗಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಕ್ಕೆ ಸೇರಿದ ಸ್ವಂತ ಜಾಗ ಹಾಗೂ ಕಟ್ಟಡಗಳಾವುವು? (ಮಾಹಿತಿಯನ್ನು ನೀಡುವುದು) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕರಜಗಿ ಸಂಘದ ಹೆಸರಿನಲ್ಲಿ ನಿವೇಶನ ಸಂಖ್ಯೆ 1-259 ರಲ್ಲಿ 100*100 ನಿವೇಶನ ಗ್ರಾಮ ಪಂಚಾಯತಿ ವತಿಯಿಂದ ಸಂಘದ ಹೆಸರಿಗೆ ವರ್ಗಾವಣೆ ಆಗಿ ಉಪನೋಂದಣಾಧಿಕಾರಿ, ಅಫಜಲಪೂರ ಇವರ ಕಚೇರಿಯಲ್ಲಿ ನೋಂದಣಿ ಆಗಿರುತ್ತದೆ. ಸದರಿ ನಿವೇಶನದಲ್ಲಿ ಸಂಘದ ಕಚೇರಿ ಕಟ್ಟಡ ಮತ್ತು ಗೋದಾಮು ನಿರ್ಮಿಸಲಾಗಿದೆ. |

| | | |
|---|---|---|
| | | ಗೋದಾಮಿನ ಒಂದು ಭಾಗದಲ್ಲಿ ಕೆ.ಎಂ.ಎಫ್, ಕಲಬುರಗಿ ಇವರಿಗೆ ಹಾಲು ಶೇಖರಣೆಗೆ ಬಾಡಿಗೆ ನೀಡಲಾಗಿದ್ದು, ಉಳಿದ ಗೋದಾಮಿನ ಭಾಗವನ್ನು ತೊಗರಿ ಖರೀದಿ ಕೇಂದ್ರ ಸಂದರ್ಭದಲ್ಲಿ ತೊಗರಿ ದಾಸ್ತಾನಿಗಾಗಿ ಉಪಯೋಗಿಸಲಾಗುತ್ತಿದ್ದು, ಹೀಗೆ ಕಚೇರಿ ಕಟ್ಟಡ ಹಾಗೂ ಗೋದಾಮು ಸದುಪಯೋಗವಾಗುತ್ತಿದೆ. |

**ಸಂಖ್ಯೆ: ಸಿಒ 356 ಸಿಎಲ್‌ಎಸ್ 2021**

**(ಎಸ್.ಟಿ. ಸೋಮಶೇಖರ್)**

**ಸಹಕಾರ ಸಚಿವರು**